ಕರ್ನಾಟಕ ವಿಧಾನ ಪರಿಷತ್

1. ಸದಸ್ಯರ ಹೆಸರು : ಶ್ರೀ ಟಿ.ಎ. ಶರವಣ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1592
3. ಉತ್ತರಿಸಬೇಕಾದ ದಿನಾಂಕ : 20-03-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	NREGA ಯೋಜನೆಯಡಿ ಕೈಗೊಳ್ಳಲಾಗುವ ಕಾಮಗಾರಿಗಳಲ್ಲಿ ಮಾನವ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತದ ಪ್ರಮಾಣವೆಷ್ಟು;	ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಕೂಲಿ ಮತ್ತು ಸಾಮಗ್ರಿಯ ಅನುಪಾತದ ಪ್ರಮಾಣವು ಶೇಕಡ 60:40 ಆಗಿರುತ್ತದೆ.
ಆ)	ರಾಜ್ಯದಲ್ಲಿ 2019-20ನೇ ಸಾಲಿಗೆ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವನ್ನು ಕಾಪಾಡಿಕೊಂಡು ಕಾಮಗಾರಿಗಳನ್ನು ನಿರ್ವಹಿಸಿದ ಜಿಲ್ಲೆಗಳು ಹಾಗೂ ಅನುಪಾತವನ್ನು ಮೀರಿದ ಜಿಲ್ಲೆಗಳು ಯಾವುವು; (ಅಂಕಿಅಂಶಗಳ ಸಮೇತ ವಿವರವನ್ನು ನೀಡುವುದು)	ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 2019-20ನೇ ಸಾಲಿನಲ್ಲಿ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವನ್ನು ಕಾಪಾಡಿಕೊಂಡು ಕಾಮಗಾರಿಗಳನ್ನು ನಿರ್ವಹಿಸಿದ ಹಾಗೂ ಅನುಪಾತವನ್ನು ಮೀರಿ ಕಾಮಗಾರಿಗಳನ್ನು ನಿರ್ವಹಿಸಿದ ಜಿಲ್ಲೆಗಳ ವಿವರಗಳನ್ನು ***ಅನುಬಂಧ-1*** ರಲ್ಲಿ ನೀಡಿದೆ.
ಇ)	ಮಾನವ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತದಲ್ಲಿ ವ್ಯತ್ಯಾಸಗಳುಂಟಾದಲ್ಲಿ ಸಾಮಗ್ರಿ ವೆಚ್ಚವನ್ನು ಪಾವತಿಸಲು ಯೋಜನೆಯಡಿ ಅವಕಾಶಗಳಿದೆಯೇ; ಇಲ್ಲವಾದಲ್ಲಿ, ಅದನ್ನು ಹೇಗೆ ಸರಿಪಡಿಸಲಾಗುತ್ತದೆ.	ಇಲ್ಲ. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸಾಮಗ್ರಿ ಅನುಪಾತವು ಶೇ.40ರಷ್ಟನ್ನು ಮೀರಿದ ಕೂಡಲೇ ನರೇಗಾ ತಂತ್ರಾಂಶದಲ್ಲಿ Material List Generation ತಾನಾಗಿಯೇ ಬ್ಲಾಕ್ ಆಗುತ್ತದೆ ಮತ್ತು ಶೇ.40ರ ಮಿತಿಯೊಳಗೆ ಮಾತ್ರ ಸಾಮಗ್ರಿ ವೆಚ್ಚ ಪಾವತಿಸಲು ಅವಕಾಶವಿರುತ್ತದೆ. ಗ್ರಾಮ ಪಂಚಾಯಿತಿ ಮತ್ತು ಅನುಷ್ಠಾನ ಇಲಾಖೆಗಳು ಹೆಚ್ಚು ಕೂಲಿ ಆಧಾರಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮೂಲಕ ಕೂಲಿ ಸಾಮಗ್ರಿ ಅನುಪಾತವನ್ನು ಸರಿಪಡಿಸಬೇಕಾಗಿರುತ್ತದೆ.
ಈ)	ಈ ಯೋಜನೆಯಡಿ ಹೆಚ್ಚು ಮಾನವ ಕೂಲಿಯನ್ನು ಬಯಸುವ ಪ್ರಮುಖವಾದ ಕಾಮಗಾರಿಗಳು ಯಾವುವು;	ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ಕಾಮಗಾರಿಗಳಾದ ಕೆರೆ ಹೂಳೆತ್ತುವುದು, ಬದು ನಿರ್ಮಾಣ, ಜಲಾನಯನ ಕಾಮಗಾರಿಗಳು, ಅರಣ್ಯೀಕರಣ ಕಾಮಗಾರಿಗಳು, ತೋಟಗಾರಿಕೆ ಕಾಮಗಾರಿಗಳು ಮತ್ತು ಮುಂತಾದ ಕಾಮಗಾರಿಗಳು ಹೆಚ್ಚು ಮಾನವ ದಿನಗಳನ್ನು ಒಳಗೊಳ್ಳುತ್ತವೆ.

ಉ)	ನೆರೆ ಪೀಡಿತ ಜಿಲ್ಲೆಗಳಲ್ಲಿ ಹೆಚ್ಚು ಮಾನವ ಕೂಲಿಯನ್ನು ಬಯಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಕೂಗು ಸರ್ಕಾರದ ಗಮನಕ್ಕೆ ಬಂದಿದಯೇ; ಹಾಗಿದ್ದರೇ, ನೆರೆ ಪೀಡಿತ ಪ್ರದೇಶಗಳಲ್ಲಿ ಆಸ್ತಿಗಳ ದುರುಸ್ತಿಗೆ ಸರ್ಕಾರದ ಮುಂದಿರುವ ಮಾರ್ಗೋಪಾಯಗಳಾವುವು?	ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೆರೆ ಪೀಡಿತ ಪ್ರದೇಶಗಳಲ್ಲಿ ಹೆಚ್ಚಿನ ಮಾನವ ದಿನಗಳ ಸೃಜನೆಗೆ ಅನುಕೂಲವಾಗುವಂತೆ, ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಹೆಚ್ಚುವರಿ 50 ಮಾನವ ದಿನಗಳ ಉದ್ಯೋಗ ಸೃಜನೆಗೆ ಅನುವು ಮಾಡಿಕೊಡಲಾಗಿದೆ ಹಾಗೂ ನೆರೆಪೀಡಿತ ಪ್ರದೇಶಗಳಲ್ಲಿ ಒಂದು ಅಥವಾ ಎರಡು ಬೃಹತ್ ಸಮುದಾಯದ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಸಂಬಂಧಿಸಿದ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಇದ್ದರಿಂದ ಹೆಚ್ಚಿನ ಮಾನವ ದಿನಗಳ ಸೃಜನೆ ಮಾಡಲಾಗುತ್ತದೆ. ಮುಂದುವರೆದು, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅರ್ಹ ಕಾಮಗಾರಿಗಳ ಪಟ್ಟಿಯನ್ನು ಸಿದ್ದಪಡಿಸಿದ್ದು, ಸದರಿ ಕಾಮಗಾರಿಗಳ ದುರಸ್ತಿ ಕಾರ್ಯವನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಅರ್ಹ ದುರಸ್ತಿ ಕಾಮಗಾರಿಗಳ ಪಟ್ಟಿಯನ್ನು ***ಅನುಬಂಧ–2*** ರಲ್ಲಿ ನೀಡಿದೆ.

ಸಂಖ್ಯೆ: ಗ್ರಾಅಪ 38(135) ಉಖಾಯೋ 2019

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ-1

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1592

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವನ್ನು ನಿರ್ವಹಿಸಿದ ಹಾಗೂ ಅನುಪಾತವನ್ನು ಮೀರಿದ ಜಿಲ್ಲೆಗಳ ವಿವರಗಳು

ಕ್ರ.ಸಂ.	ಜಿಲ್ಲೆ	Labour Expenditure On Cost Basis	Wage %age	Material Expenditure On Cost Basis	Material %age	Total
ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವನ್ನು ನಿರ್ವಹಿಸಿದ ಜಿಲ್ಲೆಗಳು (Districts exceeded 40%)						
1	ರಾಮನಗರ	14793.53	60.19	9785.48	39.81	24579.01
2	ಚಿಕ್ಕಬಳ್ಳಾಪುರ	8802.46	60.36	5780.7	39.64	14583.16
3	ಕೊಪ್ಪಳ	11631.09	60.71	7526.27	39.29	19157.36
4	ಕೊಡಗು	1204.36	60.73	778.69	39.27	1983.05
5	ಬೆಳಗಾವಿ	19686.86	61.17	12495.6	38.83	32182.46
6	ಹಾವೇರಿ	7604.99	61.60	4740.78	38.40	12345.77
7	ಚಿಕ್ಕಮಗಳೂರು	6298.01	61.62	3923.47	38.38	10221.48
8	ಧಾರವಾಡ	4441.13	61.82	2742.38	38.18	7183.51
9	ವಿಜಯಪುರ	11583.06	62.15	7054.58	37.85	18637.64
10	ಕೋಲಾರ	10733.71	62.64	6402.8	37.36	17136.51
11	ತುಮಕೂರು	12962.49	63.79	7358.7	36.21	20321.19
12	ಬಾಗಲಕೋಟೆ	9194.58	64.54	5051.42	35.46	14246
13	ಬೀದರ್	7283.21	65.28	3872.87	34.72	11156.08
14	ಶಿವಮೊಗ್ಗ	7798.69	65.87	4040.32	34.13	11839.01
15	ಗದಗ	7748.73	66.25	3948.08	33.75	11696.81
16	ಉಡುಪಿ	1023.04	68.15	478.21	31.85	1501.25
17	ಬಳ್ಳಾರಿ	17993.92	69.28	7978.63	30.72	25972.55
18	ಉತ್ತರ ಕನ್ನಡ	3496.61	72.43	1330.79	27.57	4827.4
19	ರಾಯಚೂರು	23844.33	74.87	8005.39	25.13	31849.72
20	ಬೆಂಗಳೂರು (ನ)	206.85	77.53	59.96	22.47	266.81
21	ಕಲಬುರ್ಗಿ	10238.45	79.31	2670.5	20.69	12908.95
22	ಯಾದಗಿರಿ	6304.01	79.46	1630.04	20.54	7934.05
ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವನ್ನು ಮೀರಿದ ಜಿಲ್ಲೆಗಳು (Districts exceeded 40%)						
1	ಹಾಸನ	10932.52	53.11	9650.54	46.89	20583.06
2	ಮೈಸೂರು	5444.61	55.66	4337.55	44.34	9782.16
3	ಬೆಂಗಳೂರು (ಗ್ರಾ)	2856.64	56.44	2204.55	43.56	5061.19
4	ದಕ್ಷಿಣ ಕನ್ನಡ	3046.14	57.87	2217.87	42.13	5264.01
5	ದಾವಣಗೆರೆ	6996.54	58.06	5053.75	41.94	12050.29
6	ಮಂಡ್ಯ	6794.94	58.93	4734.87	41.07	11529.81
7	ಚಿತ್ರದುರ್ಗ	14543.37	59.63	9846.64	40.37	24390.01
8	ಚಾಮರಾಜನಗರ	6530.91	59.84	4383.25	40.16	10914.16

LCB-1592

ಅನುಬಂಧ -2

ನೆರೆ ಹಾವಳಿಯಿಂದ ಹಾನಿಗೊಳಗಾದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಬೇಕಾದ ಅರ್ಹ ಕಾಮಗಾರಿಗಳ ವಿವರ.

1. Repair and Maintenance of Anganwadi Building for Community.
2. Repair and Maintenance of Gram Panchayat/Panchayat Bhavan Building for Community.
3. Repair and Maintenance of Bharat Nirman Seva Kendra Building for Community.
4. Repair and Maintenance of Food Grains Storage Building for Community.
5. Repair and Maintenance of Earthen graded bund for Community.
6. Repair and Maintenance of Pebble graded bund for Community.
7. Repair and Maintenance of Stone graded bund for Community.
8. Repair and Maintenance of Feeder Canal for Community.
9. Repair and Maintenance of Distributary Canal for Community.
10. Repair and Maintenance of Water Course Canal for Community.
11. Repair and Maintenance of Crematorium.
12. Construction of Flood/Diversion Channel for Community.
13. Renovation of Flood/Diversion Channel for Community.
14. Repair and Maintenance of Flood/Diversion Channel for Community.
15. Construction of Culvert/cross drainage structures for Community.
16. Repair and Maintenance of intermediate and Link Storm water drain for Community.
17. Repair and Maintenance of Coastal protection storm water drain for Community.
18. Repair and Maintenance of Diversion Storm water drain for Community.
19. Repair and Maintenance of Bitumen Top Roads for Community.
20. Repair and Maintenance of Gravel Road Roads for Community.
21. Repair and Maintenance of Cyclone Shelter for Community.
22. Repair and Maintenance of Play field for Community.
23. Repair and Maintenance of Compound wall for government run schools for Community.

NOTE: Repair and Maintenance to be taken up only for the assets created under MGNREGS.

ಆಯುಕ್ತರು ಗ್ರಾಮೀಣಾಭಿವೃದ್ಧಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ